# 2020ರ ಜನವರಿ 01 ರಂದು ನಡೆಯುವ ಹಣಕಾಸು ಸಮಿತಿ 35ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಣಕಾಸು ಸಮಿತಿ 35ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **2020ರ ಜನವರಿ 01 ರಂದು** ಮಧ್ಯಾಹ್ನ2.20ಗಂಟೆಗೆ ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು) ಬಹುಮಹಡಿಗಳ ಕಟ್ಟಡ, ಬೆಂಗಳೂರು–560001, ಸಮಿತಿ ಕೊಠಡಿಯಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| 1. | **ಪ್ರೊ. ವಿ. ಗಿರೀಶ್‌ಚಂದ್ರ,** ಕುಲಪತಿಗಳು(ಪ್ರ) ಕಸಂವಿ. | **ಅಧ್ಯಕ್ಷರು** |
| 2. | **ಕೆ.ಎಲ್ ಸುಬ್ರಹ್ಮಣ್ಯ,** ಉಪ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ | **ಸದಸ್ಯರು** |
| 3. | **ಶ್ರೀ ಶಿವಕುಮಾರ್ ಎನ್.** ಪ್ರಶಾಸನ ಸಮಿತಿ ಸದಸ್ಯರು, ಕಸಂವಿ | **ಸದಸ್ಯರು** |
| 4. | **ಪ್ರೊ. ವಿ. ಗಿರೀಶ್‌ಚಂದ್ರ,** ಪ್ರಶಿಕ್ಷಣ ಪರಿಷತ್ ಸದಸ್ಯರು, ಕಸಂವಿ | **ಸದಸ್ಯರು** |
| 5. | **ಪ್ರೊ, ವೀರನಾರಾಯಣ ಎನ್, ಕೆ ಪಾಂಡುರಂಗಿ, ಕುಲಸಚಿವರು, ಕಸಂವಿ.** | **ಸದಸ್ಯರು** |
| 6. | **ಶ್ರೀ ಪಂಚಲಿಂಗಸ್ವಾಮಿ, ಎಸ್,** ಹಣಕಾಸು ಅಧಿಕಾರಿಗಳು, **ಕಸಂವಿ** | **ಸದಸ್ಯ ಕಾರ್ಯದರ್ಶಿ** |
| | **ಗೈರು ಹಾಜರಿ** | |
| 7. | **ಬಿ.ಎಲ್. ರಮೇಶ್,** ಜಂಟಿ ಕಾರ್ಯದರ್ಶಿಗಳು, ಹಣಕಾಸು ಇಲಾಖೆ | **ಸದಸ್ಯರು** |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿ ಗಳು ಮಂಡಿತವಾಗಿ ನಿರ್ಣಯಗೊಂಡವು

**ವಿಷಯ 1:ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ 2017–18ನೇ ಸಾಲಿನ ಆಡಿಟ್ ವರದಿಯು ಮುದ್ರಣ ಮಾಡಲಾಗಿದ್ದು ವಿಧಾನಸಭೆ, ವಿಧಾನ ಪರಿಷತ್‌ಗೆ ಮಂಡಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.**

**ಟಿಪ್ಪಣಿ:** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ 2017–18ನೇ ಸಾಲಿನ ಆಡಿಟ್ ವರದಿಯನ್ನು ಈಗಾಗಲೇ ಮುದ್ರಣ ಮಾಡಲಾಗಿದ್ದು ನಿಯಮಾನುಸಾರ ವಿಧಾನಸಭೆ, ವಿಧಾನ ಪರಿಷತ್ ಅಧಿವೇಶನಕ್ಕೆ ಸಲ್ಲಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ: 2017–18ನೇ ಸಾಲಿನ ಆಡಿಟ್ ವರದಿಯನ್ನು ವಿಧಾನಸಭೆ ಮತ್ತು ವಿಧಾನ ಪರಿಷತ್ ಅಧಿವೇಶನಕ್ಕೆ ಮಂಡಿಸಲು ಸಭೆಯು ಅನುಮೋದನೆ ನೀಡಿತು.**

**ವಿಷಯ 2:"ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಬೋಧಕ–ಬೋಧಕೇತರ"** ಸಿಬ್ಬಂದಿಗಳಿಗೆ **ವೇತನ ಪಾವತಿಸಲು ಅನುಮೋದನೆಗಾಗಿ ಮಂಡಿಸಿದೆ.**

**ಟಿಪ್ಪಣಿ:** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಬೋಧಕ–ಬೋಧಕೇತರ ಸಿಬ್ಬಂದಿಗಳಿಗೆ ಪ್ರತಿತಿಂಗಳು ವೇತನ ಪಾವತಿಸಲು ಅಂದಾಜು 55.00ಲಕ್ಷ ರೂಗಳು ಅವಶ್ಯವಿದೆ. ಆದರೆ 2019–20ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕಶೀರ್ಷಿಕೆ 2202–05–103–0–23–101ರ ಅಡಿಯಲ್ಲಿ ವೇತನಗಳಿಗೆ 584.27 ಲಕ್ಷ ರೂಗಳನ್ನು ಆಯವ್ಯಯದಲ್ಲಿ ಕೋರಲಾಗಿತ್ತು. ಪುನ: ಮಧ್ಯಂತರ ಕೊರತೆ ಅನುದಾನಕ್ಕಾಗಿ 690.00ಲಕ್ಷಗಳನ್ನು ಕೋರಲಾಗಿದೆ. ಆದರೆ ರೂ.393.00 ಲಕ್ಷ(ಮೂರು ನೂರ ತ್ತೊಂಭತ್ತ್ಮೂರು) ರೂಗಳನ್ನು ಮಾತ್ರ ಸರ್ಕಾರ ಮಂಜೂರು ಮಾಡಿದ್ದು, ಅದರಲ್ಲಿ ಪ್ರತಿ ತ್ರೈಮಾಸಿಕ ಕಂತು ರೂ 98.25ಲಕ್ಷ ರೂ ಗಳಂತೆ 3 ತ್ರೈಮಾಸಿಕ ಅನುದಾನ ಒಟ್ಟು 294.75 ಲಕ್ಷಗಳು ಬಿಡುಗಡೆಯಾಗಿರುತ್ತದೆ, ಆದರೆ 2019ನೇ ಏಪ್ರಿಲ್ ತಿಂಗಳಿನಿಂದ 2019 ನವೆಂಬರ್ ತಿಂಗಳಿಗೆ ಒಟ್ಟು 458.713 ಲಕ್ಷ ರೂಗಳು ವೇತನಕ್ಕಾಗಿ ಖರ್ಚಾಗಿದ್ದು,

ಈಗಾಗಲೇ ಹೆಚ್ಚುವರಿಯಾಗಿ 163.98 ಲಕ್ಷರೂಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಆಂತರಿಕ ಮತ್ತು ಇತರೆ ಮೂಲಗಳಿಂದ ವೇತನಕ್ಕಾಗಿ ಭರಿಸಲಾಗಿರುತ್ತದೆ

2019ನೇ ಡಿಸೆಂಬರ್ ಮತ್ತು ಮುಂದಿನ ತಿಂಗಳುಗಳ ವೇತನ ಪಾವತಿಸಲು ರೂ 224.00 ಲಕ್ಷ ರೂಗಳು ಅವಶ್ಯವಿದ್ದು ತಮ್ಮ ಸಲಹೆಗಾಗಿ ಮಂಡಿಸಿದೆ.

**ನಿರ್ಣಯ: ಉನ್ನತ ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ ಅನುದಾನ ಪಡೆಯಲು ಸಭೆಯು ಸಲಹೆ ನೀಡಿತು.**

**ಹಣಕಾಸು ಅಧಿಕಾರಿಗಳು** **ಕುಲಪತಿಗಳು**